ಏರಿಯಾದ ಹೆಂಗಸರಂತೂ ಚಿತ್ರಾಳ ಹೂಕುಂಡಗಳನ್ನು ಮುಗಿ ಬಿದ್ದು ಕೊಂಡೊಯ್ಯುತ್ತಾರೆ.

ಧಾರವಾಡದ ಹೊರಭಾಗದಲ್ಲಿ ಸತ್ತೂರಿನ ಬಳಿ ಒಂದೂವರೆ ಗುಂಟೆಯ ಪ್ಲಾಟ್ ಕೊಂಡು, ಅಲ್ಲಿ ವರ್ಕ್‌ಶಾಪ್ ಮಾಡಿರೋದು ತೀರಾ ಇತ್ತೀಚಿನ ಬೆಳವಣಿಗೆ. ಮುಂಚೆ ಚಿತ್ರಾಳದ್ದು ಬೆಳಗಾವಿಯ ಭಾಗ್ಯನಗರದಲ್ಲೊಂದು ಚಿಕ್ಕ ವರ್ಕ್‌ಶಾಪ್ ಇತ್ತು. ಅಲ್ಲೀಗ ಅವಳ ತಂಗಿ ಗಾಯತ್ರಿ ಉಸ್ತುವಾರಿ ನೋಡ್ಕೋತಾಳೆ, ಧಾರವಾಡ – ಬೆಳಗಾವಿಯ ನಡುವೆ ಅರ್ಧಗಂಟೆಗೊಮ್ಮೆ ಓಡಾಡುವ ಶಟಲ್ ಬಸ್‌ಗಳಿಗೆ ಪ್ರಾಜಕ್ತಾಳೊಂದಿಗೆ ಧಾವಿಸಿ ಬಂದು ಹತ್ತಿ ಕುಳಿತು ಕಾಟನ್ ಸೆರಗಿಗೆ ಬೆವರೊರೆಸುತ್ತಾ, 'ಇವತ್ತು ಲೇಟಾಗಿ ಹೋಯ್ತು' ಅಂತ ನಗುವ ಚಿತ್ರಾ ಮೇಡಂ ಡ್ರೈವರ್ - ಕಂಡಕ್ಟರ್‌ಗಳಿಗೆ ಚಿರಪರಿಚಿತೆ. ಆದರೆ ಕಳೆದ ಒಂದೆರಡು ತಿಂಗಳುಗಳಿಂದ ಒಂಟಿಯಾಗಿ ಬಸ್ಸೇರುವ ಪ್ರಾಜಕ್ತಾಳಿಗೆ 'ಯಾಕೆ ನಿನ್ನ ಚಿತ್ರಾ ಮೇಡಂ ಕಾಣಂಗಿಲ್ಲ?' ಅಂತ ಕಂಡಕ್ಟರ್‌ಗಳು ಕೇಳುವುದಿದೆ. ಆಗೆಲ್ಲ ಅವಳು ಮಾತನಾಡದೆ ತನ್ನ ಫೋನ್ ಡಿಪಿಯಲ್ಲಿ ಹೊಸ ಆಲ್ಟೋ 800ಎಲ್‌ಎಕ್ಸ್‌ಐಗೆ ಒರಗಿ ನಿಂತ ಚಿತ್ರಾಳ ಫೋಟೋ ತೋರಿಸುತ್ತಾ, 'ನಾನೂ ಮಸ್ತ ಸಲ ಅಡ್ಡಾಡೇನಿ ಮೇಡಮ್ಮನ ಕಾರ್‌ನಾಗೆ' ಅಂತ ಸೇರಿಸ್ತಾಳೆ.

ಅಸಲು ಹೂಕುಂಡಗಳ ತಯಾರಿಕೇನೂ ಸೇರಿಸಿ ಪ್ಯಾಕಿಂಗ್, ಬಿಲ್ಲಿಂಗ್‌ಗೆ ಅಂತ ಸುಮಾರು ಹತ್ತು ಜನ ಇಲ್ಲಿ ಸತ್ತೂರಿನಲ್ಲಿ ಕೆಲಸ ಮಾಡ್ತಾರೆ, ಚಿತ್ರಾಳಿಗೆ 'ಕ್ರಾಫ್ಟ್ ವರ್ಲ್ಡ್' ಅಥವಾ 'ನೇಚರ್'ನಂಥಾ ದೊಡ್ಡ ಕಂಪನಿಗೆ ಸೇರಿಕೊಂಡು ಸಿರಾಮಿಕ್, ಹಿತ್ತಾಳೆಗಳಲ್ಲಿ ತನ್ನ ಕಲೆಗಾರಿಕೆಯನ್ನು ಸಾಣೆ ಹಿಡಿಯೋ ಹುಮ್ಮಸ್ಸಿಲ್ಲ, ಈ ಚಿಕ್ಕ ಸ್ವಂತ ಉದ್ಯಮ, ಅಲ್ಲಿಯ ಜನರ ಒಡನಾಟ, ಬರುವ ಸ್ವಲ್ಪ ಲಾಭ - ಅದೇ ಪ್ರಿಯ.

ದಾಖಲೆ ಪತ್ರಗಳಿಂದಲೋ ವಿದ್ಯುತ್ ಬಿಲ್ಲುಗಳಿಂದಲೋ ತುಂಬಿದ ಭಾರೀ ಗಾತ್ರದ ಚಿತ್ರಾ ಮೇಡಂಳ ಪರ್ಸ್ ಹಿಡಕೊಂಡು ರಿಜಿಸ್ಟ್ರಾರ್ ಕಚೇರಿ, ಕಾರ್ಪೊರೇಷನ್ ಎಂತೆಲ್ಲ ಅಡ್ಡಾಡುವುದು, ಲೋಕಲ್ ಎನ್‌ಜಿಓಗಳಿಗೆ ಹೋಗಿ ಕಲಾವಿದರನ್ನು ಭೇಟಿಯಾಗೋದು, ಫ್ಯಾಕ್ಟರಿಯಲ್ಲಿ ತಯಾರಾದ ಕುಂಡಗಳಿಗೆ ಪಾಲಿಶ್ ಹಚ್ಚಿಡೋದು, ಅವು ಸರಿಯಾಗಿ



ಪ್ಯಾಕ್ ಆದವಾ? ಅಂತ ನೋಡೋದರಿಂದ ಹಿಡಿದು 'ಜ್ಯೂಸ್' ಅಂತ ಮೇಡಂನ ಬಾಯಿಯಿಂದ ಬರುವ ಪುರುಸೊತ್ತಿಲ್ಲದಂತೆ ಓಡಿ ಬಂದು ಸಕ್ಕರೆಯಿಲ್ಲದ ನಿಂಬು ಶರಬತ್ ಅವಳ ಕೈಗಿಡೋದೂ ನಮ್ಮ ಪ್ರಾಜಕ್ತಾನ ಕೆಲಸವೇ. ಅವಳ ಈ ಚೂಟಿತನದಿಂದಲೇ ಅವಳು ಇತರ ಕೆಲಸಗಾರರಿಗಿಂತ ಮೇಡಂಗೆ ಖಾಸ್.

ಚಿತ್ರಾ ಶರಬತ್ ಹೀರುವವರೆಗೆ ಅಲ್ಲೇ ನಿಂತ ಪ್ರಾಜಕ್ತಾಳಿಗೆ ಯಾಕೋ ಇಸ್ಮಾಯಿಲ್ ಚಾಚಾ ಮತ್ತು ಅನ್ವರನ ಬಗ್ಗೆ ಹೇಳುವ ಮನಸ್ಸಾಯ್ತು, 'ಮೇಡಂ ನಮ್ಮ ಮನೆಯಿದೆಯಲ್ಲಾ ಅದು ಸುಣ್ಣಗಾರರ ಓಣಿ, ಆದರೆ ಎಲ್ಲ ನಮೂನೆಯ ಮಂದಿ ಇದ್ದಾರ್ರಿ ಮೇಡಂ, ನಮ್ಮ ಇಸ್ಮಾಯಿಲ್ ಚಾಚಾನ ಟೇಲರ್ ಅಂಗಡಿಯಂತೂ ಭಾಳ ಫೇಮಸ್ ರಿ' ಅಂತ ಪ್ರಾಜಕ್ತಾ ಹೇಳುವಾಗ 'ನಮ್ಮ' ಶಬ್ದ ಒತ್ತಿ ಹೇಳಿದವಳ ಕಣ್ಣ ಮಿಂಚು ಚಿತ್ರಾಗೂ ಕಂಡಿತ್ತು.

'ಹುಂ... ಈ ಚಾಚಾಗೊಬ್ಬ ಭತೀಜಾ ಇಲ್ಲವೆ?' ಅಂತಂದು ಚಿತ್ರಾ ತುಂಟ ನಗೆ ನಕ್ಕಾಗ ಪ್ರಾಜಕ್ತಾಳ ಮುಖ ಕೆಂಪಡರಿತು.

ಪ್ರಾಜಕ್ತಾ ಥಟ್ಟನೆ ಕೈಯ ಪುಟ್ಟ ಗಡಿಯಾರ ನೋಡಿಕೊಂಡಳು, 'ಅಯ್ಯೋ ಐದಾಗಿ ಹೋಯಿತೆ? ಸವ್ವಾ ಐದರ ಬಸ್ ಹಿಡ್ಕೊಂಡು ಕೋರ್ಟ್ ಸ್ಟಾಪ್‌ಗೆ ಇಳಿದು ನೇರ ಕೆಳಗಿನ ರಸ್ತೆಗುಂಟ ನಡೆದರೆ ಚಾಚಾನ ದುಕಾನ್ ಮುಟ್ಟೋದಕ್ಕೆ ಕನಿಷ್ಠ ನಲ್ವತ್ತೈದು ನಿಮಿಷ